KEA

## ಕನ್ನಡ ಪ್ರಶ್ನೆಪತ್ರಿಕೆ – I
### (ಕಡ್ಡಾಯ)

ಸಮಯ : 2 ಗಂಟೆ

Downloaded from www.pravinyata.com

ಗರಿಷ್ಠ ಅಂಕಗಳು : 100

### ಸೂಚನೆಗಳು

(1) ಅಭ್ಯರ್ಥಿಗಳು ಎಲ್ಲಾ ಭಾಗಗಳನ್ನು ಮತ್ತು ಪ್ರಶ್ನೆಗಳನ್ನು ಉತ್ತರಿಸಬೇಕು.

(2) ಪ್ರತಿ ಪ್ರಶ್ನೆಗೂ ನಮೂದಿಸಲಾದ ಅಂಕಗಳನ್ನು ಪ್ರಶ್ನೆಯ ಕೊನೆಯಲ್ಲಿ ನೀಡಲಾಗಿದೆ.

(3) ನಿರ್ದಿಷ್ಟವಾಗಿ ಸೂಚಿಸದ ಹೊರತು, ಉತ್ತರಗಳನ್ನು ಕನ್ನಡದಲ್ಲಿ ಬರೆಯತಕ್ಕದ್ದು.

(4) ಭಾಗ-ಎ ಪ್ರಶ್ನೆಸಂಖ್ಯೆ 3 ಕ್ಕೆ ಸಂಬಂಧಿಸಿದಂತೆ ಪ್ರೆಸಿ ಗದ್ಯಭಾಗವು ಸೂಚನೆಗಿಂತ ಬಹಳ ಹೆಚ್ಚು ಅಥವಾ ಕಡಿಮೆಯಾದಲ್ಲಿ ಅಂಕಗಳನ್ನು ಕಳೆಯಲಾಗುವುದು.

(5) ಭಾಗ-ಎ ಪ್ರಶ್ನೆಸಂಖ್ಯೆ 3 ನ್ನು ನೀಡಲಾದ ಪ್ರೆಸಿ ಹಾಳೆಯಲ್ಲಿಯೇ ಉತ್ತರಿಸತಕ್ಕದ್ದು.

(6) ಪತ್ರವನ್ನು ಬರೆಯುವ ಪ್ರಶ್ನೆಗಳನ್ನು ಉತ್ತರಿಸುವಾಗ ನಿಮ್ಮ ಸಹಿಯನ್ನು ಹಾಕುವುದನ್ನಾಗಲೀ ಅಥವಾ ನಿಮ್ಮ ಹೆಸರು / ವ್ಯಕ್ತಿತ್ವವನ್ನು ನಮೂದಿಸುವುದನ್ನಾಗಲೀ ಮಾಡಕೂಡದು.

### ಭಾಗ - ಎ

1. ಈ ಕೆಳಗಿನ ಯಾವುದಾದರೂ ಒಂದರ ಬಗ್ಗೆ ಸುಮಾರು 250 ಶಬ್ದಗಳಲ್ಲಿ ಒಂದು ಪ್ರಬಂಧ ಬರೆಯಿರಿ. 20

   (ಅ) ಅತಿವೃಷ್ಟಿ ಅನಾವೃಷ್ಟಿ

   (ಆ) ಮತದಾನ ಕಡ್ಡಾಯಗೊಳಿಸುವ ಅವಶ್ಯಕತೆ

   (ಇ) ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು

   (ಈ) ಉದ್ಯೋಗಸ್ಥ ಮಹಿಳೆಯರ ಸಮಸ್ಯೆಗಳು

www.pravinyata.com

2. ಈ ಕೆಳಗಿನ ಗದ್ಯಭಾಗವನ್ನು ಗಮನವಿಟ್ಟು ಓದಿ ಕೊನೆಯಲ್ಲಿರುವ ಪ್ರಶ್ನೆಗಳಿಗೆ ನಿಮ್ಮ ಮಾತುಗಳಲ್ಲಿ ಉತ್ತರಿಸಿ. 15

ಸಾಧಿತವಾಗಬೇಕಾಗಿರುವ ಕಲ್ಯಾಣವೂ ಅಪಾರವಾಗಿದೆ. ನೂರಾರು ಮಂಗಲದ ಮುಖಗಳು ನಮ್ಮ ನಿರಂತರ ವ್ಯವಸಾಯವನ್ನು ಹಾರೈಸುತ್ತಿವೆ. ಪರಿಹರಿಸಿಕೊಳ್ಳಬೇಕಾಗಿರುವ ಅನಿಷ್ಟಗಳೂ ಅನೇಕವಿದ್ದು ಸಾಕಷ್ಟು ಕಾಡುತ್ತಿವೆ. ಸಣ್ಣಪುಟ್ಟ ವಿವರಗಳಲ್ಲಿ ನಮ್ಮೆಲ್ಲರಿಗೂ ಒಮ್ಮನ ಒಕ್ಕೊರಲು ಇರದಿದ್ದರೂ ರಾಷ್ಟ್ರಕ್ಷೇಮ ಸಾಧನೆಯ ವಿಷಯದಲ್ಲಿ ನಾವೆಲ್ಲ ಏಕಹೃದಯರೆ !



REDMI NOTE 7 PRO

ನಿಮ್ಮಲ್ಲಿ ಅನೇಕರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಾಲ್ದಾಳುಗಳಾಗಿ ದಳಪತಿಗಳಾಗಿ ಹೋರಾಡಿದ್ದೀರಿ; ಕೆಲವರಂತೂ ಅತಿರಥ ಮಹಾರಥರಾಗಿ ಹೋರಾಡಿ ಹೆಸರು ಗಳಿಸಿದ್ದೀರಿ. ಕೆಲವರು ದೇಶ ಸೇವೆಗಾಗಿ ಮನೆಮಾರು ಜೀವನವೃತ್ತಿಗಳನ್ನು ತ್ಯಾಗ ಮಾಡಿದ್ದೀರಿ; ಕೆಲವರು ಲಾಠಿಯೇಟು ತಿಂದಿದ್ದೀರಿ; ಕೆಲವರು ಸೆರೆಮನೆಗಳಲ್ಲಿ ತಪಸ್ಸು ಮಾಡಿದ್ದೀರಿ; ಮತ್ತೆ ಕೆಲವರು ನೇರವಾಗಿ ಸಂಗ್ರಾಮದಲ್ಲಿ ಭಾಗವಹಿಸದಿದ್ದರೂ ಮನ, ಧನ, ಸುತ, ಬಂಧುಮಿತ್ರರನ್ನು ಸ್ವಾತಂತ್ರ್ಯಕಾಗಿ ಬಲಿಕೊಟ್ಟು ದುಃಖಾಗ್ನಿಯಲ್ಲಿ ಬೆಂದಿದ್ದೀರಿ / ಅವರಿವರಿರಲಿ. ಯಃಕಶ್ಚಿತರೂ ಕೂಡ, ಅಂಯಸ್ಕಾಂತದ ಪ್ರಭಾವಕ್ಕೆ ಸಿಲುಕುವ ಸಾಮಾನ್ಯಲೋಹವೂ ಕಾಂತತ್ವ ಪಡೆಯುವಂತೆ, ಮಹಾತ್ಮ ಗಾಂಧೀಜಿಯ ತಪೋಮಯ ಸಾನ್ನಿಧ್ಯದ ಪ್ರಭಾವಕ್ಕೆ ಒಳಗಾಗಿ ಪೌರಾಣಿಕ ಸದೃಶವಾದ ಮಹಾವೀರತ್ವದಿಂದ ಅದ್ಭುತ ಸಾಹಸಗಳನ್ನೆಸಗಿ ಹೋಗಿದ್ದಾರೆ. ಅವರೆಲ್ಲರ ಬಲಿದಾನದ ಮುಂದೆ ನನ್ನಂತವನ ಸೇವೆ, ಹಾಲಿನ ಮುಂದೆ ನೀರಿನಂತೆ, ನಗಣ್ಯ ಎಂಬುದನ್ನು ಚೆನ್ನಾಗಿ ಮನಸ್ಸಿನಲ್ಲಿಟ್ಟುಕೊಂಡು, ನಾನು ಮುಂದೆ ಆಡಲಿರುವ ನಾಲ್ಕು ಮಾತುಗಳಿಗೆ ಅಪಾರ್ಥವನ್ನಾಗಲಿ ಅಹಂಕಾರವನ್ನಾಗಲಿ ಆರೋಪಿಸದಿರಲಿ ಎಂಬ ಉದ್ದೇಶದಿಂದ ಆತ್ಮಕಥಾರೂಪವಾದ ಒಂದೆರಡು ಮಾತು ಹೇಳುತ್ತೇನೆ.

ನಾನು ಲಾಠಿಯೇಟು ತಿಂದಿಲ್ಲ; ಸೆರೆಮನೆಗೆ ಹೋಗಿಲ್ಲ; ಬ್ರಿಟೀಷರ ವಿರುದ್ಧವಾಗಿ ತಿಲಕರ ಮತ್ತು ಗಾಂಧೀಜಿಯ ಪ್ರಭಾವವು ಪ್ರಚೋದಿಸಿದ ವಿದ್ಯಾರ್ಥಿ ಮೆರವಣಿಗೆಗಳಲ್ಲಿ ಕೂಗಿಕೊಂಡು ಅಲೆದಿದ್ದೇನೆ. ವಿದೇಶಿ ವಸ್ತ್ರದಹನ ಯಜ್ಞಗಳಲ್ಲಿ ಭಾಗವಹಿಸಿ, ಪ್ರೇಕ್ಷಕನಾಗಿ ನಿಂತಿದ್ದು, ಪಕ್ಕದಲ್ಲಿ ನಿಂತಿದ್ದ ಮಿತ್ರರು ಹುರಿದುಂಬಿಸಿದ್ದಕ್ಕಾಗಿ ತಾತ್ಕಾಲಿಕ ಭಾವಾವೇಶಕ್ಕೆ ಒಳಗಾಗಿ ಇದ್ದದ್ದೊಂದು ಅಂಗಿಯನ್ನೂ ಟೋಪಿಯನ್ನೂ ಬೆಂಕಿಗೆ ಎಸೆದದ್ದೂ ಉಂಟು !

www.pravinyata.com

ಆದರೆ ದೇಶದಲ್ಲಿ ನಡೆಯುತ್ತಿದ್ದದ್ದು ಏನು ಎಂಬುದರ ಅರ್ಥದ ಅರಿವು ಮಲೆನಾಡಿನ ಕಾಡಿನ ಮೂಲೆಯ ಹಳ್ಳಿಯಿಂದ ಬಂದಿದ್ದ ಬಾಲಕನ ಗ್ರಾಮೀಣ ಪ್ರಜ್ಞೆಗೆ ಗೋಚರವಾದ ಮೇಲೆ, ಸುಮಾರು ೧೯೨೫-೨೬ ರಿಂದ ೧೯೪೭-೪೮ ರವರೆಗೆ ನಡೆದ ಭಾರತದ ಜಗನ್ಮಹಾದ್ಭುತ ಸ್ವಾತಂತ್ರ್ಯ ಸಂಗ್ರಾಮದ ಚಿತ್ತಾಗಾರದಲ್ಲಿ ನನ್ನ ಕವಿಚೇತನಸಮುದ್ರ ಸಂಪೂರ್ಣ ಮಗ್ನವಾಗಿಬಿಟ್ಟಿತು. ಆ ಬೃಹತ್ ಸಾಗರದ ಸಂಮಥನ ಕ್ಷೋಭೆಯಿಂದ ಅಲ್ಲೋಲಕಲ್ಲೋಲವಾದ ಮಹಾತರಂಗಗಳೆಲ್ಲ ಈ ಕವಿಚೇತನ ಸಮುದ್ರದಲ್ಲಿಯೂ ಪ್ರತಿಫಲಿತವಾಗಿ ಸಾವಿರಾರು ಕವನರಾಶಿ ಪುಂಜೀಭೂತವಾದವು. ಸಾಹಿತ್ಯವೇಳೆಯಲ್ಲಿ 'ಪಾಂಚಜನ್ಯ', 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ', 'ಕೃತ್ತಿಕೆ', ಮತ್ತು 'ಇಕ್ಷುಗಂಗೋತ್ರಿ' ಈ ಕವನಸಂಗ್ರಹಗಳಲ್ಲಿ ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಚಿರಸ್ಮರಣೀಯವಾದ ಸನ್ನಿವೇಶಗಳೂ ಘಟನೆಗಳೂ ವ್ಯಕ್ತಿಗಳೂ ವ್ಯಕ್ತಿಜೀವನದ ಭವ್ಯವ್ಯಾಪಾರಗಳೂ ಕಂಡರಣೆಗೊಂಡು, ಆ ಸಂಗ್ರಾಮದ ಇತಿಹಾಸವನ್ನು ಶಾಶ್ವತಗೈಯ್ಯುವ ಸ್ತಂಭದೀಪಿಕೆಗಳಂತೆ ಪಂಕ್ತಿಗೊಂಡು ನಿಂತಿವೆ. ಅರುವತ್ತು ದಿವಸದ ಉಪವಾಸನಂತರ ಜೈಲಿನಲ್ಲಿಯೆ ಹುತಾತ್ಮನಾದ ಜತೀಂದ್ರನಾಥದಾಸರಿಂದ ೨೦-೯-೧೯೨೯ ರಲ್ಲಿ ಪ್ರೇರಿತವಾದ 'ಪಾಂಚಜನ್ಯ' ಎಂಬ ವೀರ ಕವನದಿಂದ ಹಿಡಿದು ಸಾವಿರದ ಒಂಬೈನೂರ ನಲ್ವತ್ತೇಳನೆಯ ಆಗಸ್ಟ್ ಹದಿನೈದರ ಮಧ್ಯರಾತ್ರಿಯ ಜಗದ್‌ಭವ್ಯ ಮಹಾಸಮಾರಂಭದಿಂದ ಪ್ರಚೋದಿತವಾದ 'ಸ್ವಾತಂತ್ರ್ಯೋತ್ಸವ ಮಹಾಪ್ರಗಾಥ' ವರೆಗೂ ವ್ಯಾಪಿಸಿದೆ ಆ ಜ್ಯೋತಿಃಪಂಕ್ತಿ.

www.pravinyata.com

ಸದ್ಯಕ್ಕೆ ಆದಿರಲಿ. ಎಂತೋ ಅಂತು ಆ ದಾರುಣ ದಿವ್ಯಕಥೆ ಮುಗಿದು ನಾವೀಗ ಭವ್ಯ ಸ್ವತಂತ್ರ ಭಾರತದ ಪುಣ್ಯವಂತ ಪ್ರಜೆಗಳಾಗಿದ್ದೇವೆ. ಸಮಾಜವಾದ ಸ್ವರೂಪದ ಸ್ವತಂತ್ರ ಪ್ರಜಾಸತ್ತೆಯ ಸರ್ವಧರ್ಮ ಸಮನ್ವಯದ ಮತ್ತು ಸರ್ವೋದಯದ ಲೌಕಿಕ ಕ್ಷೇಮರಾಷ್ಟ್ರವನ್ನು ನಿರ್ಮಿಸಲು ವ್ರತತೊಟ್ಟು ಕಾರ್ಯೋನ್ಮುಖರಾಗಿದ್ದೇವೆ. ಎಡರು ತೊಡರುಗಳೇನೆ ಇರಲಿ, ಕ್ಷೇಮಕಷ್ಟಗಳೇನೆ ಬರಲಿ. ಅದು ಸಿದ್ಧಿಸುವುದರಲ್ಲಿ ಸಂದೇಹವಿಲ್ಲ.

ಕನ್ನಡನಾಡು ಒಟ್ಟಾಗಿದೆ. ಕನ್ನಡವನ್ನು ಅಧಿಕೃತ ಭಾಷೆ ಎಂದು ಘೋಷಿಸಿದ್ದೀರಿ. ಇತರ ರಾಜ್ಯಗಳಂತೆ ಕರ್ನಾಟಕವೂ ರಾಜ್ಯಾಂಗದ ಪ್ರಕಾರ ತನ್ನ ರಾಜ್ಯಪಾಲರನ್ನು ಪಡೆದು, ಪ್ರಜಾಸತ್ತೆಯಲ್ಲಿ ಉಳಿದ ರಾಜ್ಯಗಳಿಗೆ ಹಿಂದೆ ಬೀಳದೆ ಸಮಾನತೆಯನ್ನು ಸಾಧಿಸಿದೆ.

ಪ್ರಶ್ನೆಗಳು :

(ಅ) ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜನ ಯಾವ ಯಾವ ರೀತಿಯ ತ್ಯಾಗ ಮಾಡಿದ್ದಾರೆ ?

(ಆ) ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಾತ್ಮ ಗಾಂಧೀಜಿ ಬೀರಿದ ಪ್ರಭಾವ ಎಂತಹುದು ?

(ಇ) ಸ್ವಾತಂತ್ರ್ಯ ಸಂಗ್ರಾಮದ ನೆನಪುಗಳು ಕವಿಯ ಯಾವ ಕೃತಿಗಳಲ್ಲಿ ಸ್ತಂಭದೀಪಿಕೆಗಳಂತೆ ಪಂಕ್ತಿಗೊಂಡು ನಿಂತಿವೆ ?

(ಈ) 'ಪಾಂಚಜನ್ಯ' ಕವನಕ್ಕೆ ಪ್ರೇರಣೆಯಾದ ಸಂಗತಿ ಯಾವುದು ? ಆ ಪ್ರಭಾವ ಯಾವ ಕವನದವರೆಗೆ ವ್ಯಾಪಿಸಿದೆ ?

(ಉ) ಕನ್ನಡನಾಡು ಹೇಗೆ ಸಮಾನತೆಯನ್ನು ಸಾಧಿಸಿದೆ ?

3. ಕೆಳಗಿನ ಗದ್ಯ ಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ 60 ಶಬ್ದಗಳಿಗೆ ಮೀರದಂತೆ ಸಂಗ್ರಹಿಸಿ ಬರೆಯಿರಿ. ಲೇಖನದ ಕೊನೆಯಲ್ಲಿ ನೀವು ಬಳಸಿರುವ ಶಬ್ದಗಳ ಸಂಖ್ಯೆಯನ್ನು ಸೂಚಿಸಿ. 15

**ವಿಶೇಷ ಸೂಚನೆ : ಲೇಖನ ಸಂಗ್ರಹವು ಸೂಚಿಸಿರುವುದಕ್ಕಿಂತ ಹೆಚ್ಚು ಅಥವಾ ಕಡಿಮೆ ಇದ್ದರೆ ಅಂಕಗಳನ್ನು ಕಳೆಯಲಾಗುವುದು.**

ಅನಕೊಂಡಾಗಳು ವಿಪರೀತ ಗಾತ್ರದಲ್ಲಿ ಬೆಳೆಯಬಲ್ಲವು. ಒಬ್ಬ ಮನುಷ್ಯನಷ್ಟು ದಪ್ಪಕ್ಕೆ ಬೆಳೆಯಬಲ್ಲವು. ಅಷ್ಟೇ ಅಲ್ಲ ಇಡೀ ಮನುಷ್ಯನನ್ನೇ ನುಂಗಬಲ್ಲವು. ಅದಕ್ಕಾಗಿಯೇ ಅವನ್ನು ಎತ್ತಿ ಹಿಡಿಯುವಾಗ ಮೊದಲು ಬಾಯನ್ನು ಬಿಗಿಯಾಗಿ ಮುಚ್ಚಿ ಹಿಡಿದುಕೊಳ್ಳುತ್ತಾರೆ. ಇವು ಕಾಡಿನಲ್ಲಿ ಬಹಳಷ್ಟು ಬಾರಿ ಏಕಾಂಗಿಗಳಾಗಿ ಕಳೆಯುವ ಜೀವಿಗಳು, ನೂರು ಅಡಿಯಷ್ಟು ಉದ್ದದ ಅನಕೊಂಡಾ ಕಂಡ ಸ್ಥಳೀಯರಿದ್ದಾರೆ. ಅದು ಎಷ್ಟು ಉತ್ಪ್ರೇಕ್ಷೆಯೋ ನಿಜವೋ ತಿಳಿಯದು, ಆದರೆ ನಾವು ಕಂಡ ಅನಕೊಂಡಾ ಹದಿನೈದು ಅಡಿಯಾದರೂ ಉದ್ದವಿತ್ತು.

ಅನಕೊಂಡಾಗಳು ಬೋವಾ ಕನ್ಸ್ಟ್ರಿಕ್ಟರ್ ಕುಟುಂಬಕ್ಕೆ ಸೇರಿದ ಹಾವುಗಳು. ಇವು ತಮ್ಮ ಬೇಟೆಯನ್ನು ಕಚ್ಚಿ ಕೊಲ್ಲುವುದಿಲ್ಲ. ಅವುಗಳ ಸುತ್ತ ಸುತ್ತಿಕೊಂಡು ಗಟ್ಟಿಯಾಗಿ ಬಿಗಿದುಕೊಂಡು ಉಸಿರುಕಟ್ಟಿಸಿ ಸಾಯಿಸುತ್ತವೆ. ಇಡಿಇಡಿಯಾಗಿ ನುಂಗುತ್ತವೆ. ಅನಕೊಂಡಾಗಳು ಒಮ್ಮೆಗೆ 60-70 ಮರಿಗಳನ್ನು ಹಾಕುತ್ತವಂತೆ ! ಅನಕೊಂಡಾಗಳು ಹಸಿದಾಗ, ಸುರುಳಿ ಬಿಚ್ಚಿಕೊಂಡು, ನೀರಿನಲ್ಲಿ ಕೇವಲ ಕಣ್ಣುಗಳನ್ನಷ್ಟೆ ಹೊರಗಿಟ್ಟುಕೊಂಡು ತಮ್ಮ ಬೇಟೆಗೆ ಕಾಯುತ್ತವೆ. ನೀರು ಕುಡಿಯಲು ಬರುವ ಪ್ರಾಣಿಗಳನ್ನಿರಲಿ, ಮನುಷ್ಯನನ್ನೂ ನುಂಗಬಲ್ಲದು ಈ ಅಗಾಧ ಪ್ರಮಾಣದ ಹಾವು. ನದಿಯಲ್ಲಿ ಅಡ್ಡಾಡುವುದೆಂದರೆ ಅನಕೊಂಡಾಗಳಿಗೆ ಬಲು ಖುಷಿ. ನದಿ ನೀರಿನಲ್ಲಿ ಮುಳುಗಿ, ಒಂದಿಷ್ಟೇ ಮೂತಿ ಹೊರಗಿಟ್ಟು ತೇಲುವ ಅನಕೊಂಡಾಗಳು. ಪಿರಾನಗಳ ಬಗ್ಗೆ, ಅನಕೊಂಡಾಗಳ ಬಗ್ಗೆ ಇಷ್ಟೆಲ್ಲ ಮೊದಲೇ ತಿಳಿದಿದ್ದರೆ ಅಮೆಜಾನ್ ಕಾಡು ನದಿ ಎಲ್ಲವೂ ಭಯಂಕರವಾಗಿ ಕಂಡು ಬಿಡುತ್ತಿತ್ತು. ನದಿ ನೀರಿಗೆ ಕೈಹಾಕಿ ಅಲೆದಾಡಿದ ಖುಷಿ ಎಲ್ಲಿರುತ್ತಿತ್ತು !

www.pravinyata.com

ಮತ್ತೆ ದೋಣಿ ಹೊರಟಿತು. ಒಳನೀರಿನಲ್ಲಿ ಹಾದು ದಟ್ಟವಾದ ಬೃಹತ್ ಮರಗಳ ತಾಣಕ್ಕೆ ಬಂದಿತು. ನೀರಿನ ಆಳದಲ್ಲಿ ಬೇರೂರಿ ನಿಂತ ಭಾರಿ ಗಾತ್ರದ ಮರಗಳ ನಡುವೆ ಸಂದಿಗೊಂದಿಯಲ್ಲಿ ಹಾದ ದೋಣಿ, ಅಮೆಜಾನ್ ಕಾಡಿನ ಒಳಭಾಗಕ್ಕೆ ಕರೆತಂದು ನಿಲ್ಲಿಸಿತು. ಇಲ್ಲಿ ಅಮೆಜಾನಿನ 'ನೇಟಿವ್' ಜನರಿದ್ದರು. ಸ್ತ್ರೀಯರೆಲ್ಲ ಸೊಂಟದ ಮೇಲೆ ನಗ್ನ, ಅದರ ಕೆಳಗೆ ಒಂದು ಕೆಂಪು ವಸ್ತ್ರ ಸುತ್ತಿಕೊಂಡಿದ್ದರು. ಗಂಡಸರು, ಸೊಂಟದ ಕೆಳಗೆ ಹುಲ್ಲಿನ ಲಂಗ ತೊಟ್ಟಿದ್ದರು. ಪುಟ್ಟ ಹುಲ್ಲಿನ ಗುಡಿಸಲು, ಅದರ ಬಗಲಿನಲ್ಲಿ ಸಾಲಾಗಿ ಒಂದಿಷ್ಟು ಈಚಲ ಛಾವಣಿ. ಈ ಛಾವಣಿಯ ಅಡಿಯಲ್ಲಿ ಗಳುಗಳ ಮೇಲೆ ಅದ್ಭುತ ಕರಕುಶಲ ವಸ್ತುಗಳನ್ನು ನೇತುಹಾಕಿದ್ದರು. ಕೊರಳಿಗೆ ಹಾರ ಬಳೆಯಂಥದ್ದು, ಕಿವಿಗೆ ನೇತು ಹಾಕಿಕೊಳ್ಳುವ ವಸ್ತುಗಳಿದ್ದವು. ಕೆಲವನ್ನು ಪುಟ್ಟ ಆಮೆಯ ಕವಚದಿಂದ, ಪುಟ್ಟಪ್ರಾಣಿಗಳ ಮೂಳೆಗಳಿಂದ ತಯಾರಿಸಿದ್ದರು, ಉಳಿದವನ್ನು ಕಾಡಿನ ಬೀಜ, ಎಲೆ, ಕಡ್ಡಿಗಳಿಂದ ತಯಾರಿಸಿದ್ದವು. ಮೂಳೆ ಗೀಳೆ ಮುಟ್ಟಲು ಹೋಗದೆ, ಬೀಜ, ಕಡ್ಡಿಯ ಸುಂದರ ಸರಗಳನ್ನು ಕೊಂಡೆ. 'ಅವಕ್ಕೆ ಹಚ್ಚಿದ ಬಣ್ಣಗಳ್ಯಾವುದೂ ರಾಸಾಯನಿಕವಲ್ಲ, ಕಾಡಿನಲ್ಲೇ ಸಹಜವಾಗಿ ದೊರೆತದ್ದು' ಎಂದಾಗ ಅಚ್ಚರಿಯಾಯಿತು. ಅವರು ಮೆತ್ತಿಕೊಂಡ ಗಾಢ ಕೇಸರಿ ಬಣ್ಣ ನೋಡಿದೆ. ಅದು ಹೇಗೆ ಬಂತು ಎಂದು ಕೇಳುವಾಗ, ಅವರಲ್ಲಿ ಒಬ್ಬಾಕೆ ನನ್ನನ್ನು ಮೂಲೆಯಲ್ಲಿದ್ದ ಒಂದು ಗಿಡದ ಬಳಿಗೆ ಕರೆದೊಯ್ದಳು. ಥೇಟ್ ನಮ್ಮ ಮೈಸೂರಿನ ಅರಮನೆಯ ಪಕ್ಕದ ಪಾರ್ಕಿನಲ್ಲಿ ನೆಟ್ಟಿರುವ ಗಿಡದಂತೆ ಇದೂ ಇತ್ತು. ಇಲ್ಲಿ ಕಂಡದ್ದು ಗಾಢ ಕೆಂಪಿನ ಕಾಯಿಗಳು. ಮುಳ್ಳುಮುಳ್ಳು ಕವಚದ ಕಾಯಿಗಳನ್ನು ಬಿಡಿಸಿ ತೋರಿಸಿದಳು. ಒಳಗೆ ಗಾಢ ಕೇಸರಿ ಬೀಜಗಳು. ಅವನ್ನು ಕೈಯಲ್ಲಿ ಹಿಸುಕಿದಾಗ ಕೈಯೆಲ್ಲಾ ಕೇಸರಿ ಬಣ್ಣ. ಆಕೆ ಅದನ್ನು ನನ್ನ ಕೆನ್ನೆಗೆ, ಹಣೆಗೆ, ಗಲ್ಲಕ್ಕೆ ಬಳಿದಳು. ಇದನ್ನು ಕನ್ನಡದಲ್ಲಿ ಕುಂಕುಮಕಾಯಿ ಎನ್ನುತ್ತಾರೆ. ಸಸ್ಯದ ಶಾಸ್ತ್ರೀಯ ಹೆಸರು 'ಬಿಕ್ಸಾ ಒರಾಂಗ್ಯಲೇಟಾ'. ಗಾಢ ಕುಂಕುಮ ವರ್ಣದ ಕಾಯಿ. ಸುಮಾರು 10-15 ಕಾಯಿಗಳ ಸಮೂಹವಾಗಿದ್ದು, ದ್ರಾಕ್ಷಿಯಂತೆ ಗೊಂಚಲು ಗೊಂಚಲಾಗಿ ಕಾಣುತ್ತದೆ. ಭಾರತದಲ್ಲೂ ಕೆಲ ಸಂಪ್ರದಾಯಸ್ಥರು ರಾಸಾಯನಿಕ ಮಿಶ್ರಿತ ಕುಂಕುಮ ಅಥವಾ ಬಿಂದಿ ಇಡದೆ, ಕುಂಕುಮಕಾಯಿ ಬೀಜದಿಂದ ತಯಾರಿಸಿದ ಕುಂಕುಮ ಉಪಯೋಗಿಸುತ್ತಾರೆ ಎಂದು ಕೇಳಿದ್ದೆ. ನಮ್ಮ ನಡುವೆ ಎಷ್ಟು ಸಾಮ್ಯವಿತ್ತು. ಅಷ್ಟೇ ಅಗಾಧವಾದ ಕಂದರವಿತ್ತು. ನಮ್ಮೊಡನೆ ಬಂದ ಇದೇ ನೆಲದ ಮೂಲದ ಈ ಪ್ರವಾಸಿ ಅಣ್ಣ-ತಂಗಿಯರು ಕೂಡಾ ತಮ್ಮ ಬೇರುಗಳಿಂದ ಅದೆಷ್ಟು ವಿಭಿನ್ನವಾಗಿ ಕಾಣುತ್ತಿದ್ದರು.

REDMI NOTE 7 PRO

4. ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ.

KEA

Drinks and drug addiction corrupts man morally, mentally and physically. As far as India is concerned. Alcoholism has become a cult among young men and women. Pubs and bars are increasing in number in big cities which attracts youth. Villagers are not an exception. Every small village will have atleast one arrack shop. Drinking and drug addiction are the greatest enemies of peace of the entire society. Drinking may be a social custom in a western country due to various factors that includes climate. India has a very hot climate and so people do not drink to prevent the body against chilliness. The situation is opposite.

## ಭಾಗ – ಬಿ

5. ಕೆಳಗಿನವುಗಳಲ್ಲಿ ಒಂದನ್ನು ಕುರಿತು 60 ಪದಗಳಿಗೆ ಮೀರದಂತೆ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ.

(a) ಮುಷ್ಕರದಿಂದುಂಟಾಗುವ ತೊಂದರೆಗಳು

(b) ವ್ಯಾಪಕವಾಗುತ್ತಿರುವ ಭೂಕಬಳಿಕೆ

(c) ಕಡಿಮೆಯಾಗುತ್ತಿರುವ ಸ್ಥಳೀಯರ ಉದ್ಯೋಗಾವಕಾಶಗಳು

6. ಕೆಳಗಿನವುಗಳಲ್ಲಿ ಒಂದರ ಅರ್ಥಸ್ವಾರಸ್ಯವನ್ನು ವಿವರಿಸಿ.

(a) ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ

(b) ತುಂಬಿದ ಕೊಡ ತುಳುಕುವುದಿಲ್ಲ

7. ಕೆಳಗಿನ ನುಡಿಗಟ್ಟುಗಳಲ್ಲಿ ಎರಡರ ವಿಶೇಷಾರ್ಥವನ್ನು ನೀಡಿ. ಅವನ್ನು ನಿಮ್ಮ ಸ್ವಂತ ವಾ ಪ್ರಯೋಗಿಸಿ.

(a) ಅಳಿಲುಸೇವೆ www.pravinyata.com

(b) ಬಣ್ಣ ಬದಲಾಯಿಸು

(c) ಕಡಿವಾಣ ಹಾಕು

(d) ತಣ್ಣೀರೆರಚು

8. ಕೆಳಗಿನವುಗಳಲ್ಲಿ ಐದಕ್ಕೆ ತತ್ಸಮ ರೂಪಗಳನ್ನು ಕೊಡಿ. 5

(a) ದಿಟ್ಟಿ
(b) ಸಕ್ಕರೆ
(c) ಕಾಗೆ
(d) ರಾಯ
(e) ಗೆಳೆಯ
(f) ಕೋಗಿಲೆ
(g) ದಾತಾರ
(h) ಜೊನ್ನ
(i) ರಕ್ಕಸ
(j) ಹಗೆ

www.pravinyata.com

9. ಕೆಳಗಿನವುಗಳಲ್ಲಿ ಐದಕ್ಕೆ ತದ್ಭವ ರೂಪಗಳನ್ನು ಕೊಡಿ. 5

(a) ಧರ್ಮ
(b) ಉದ್ಯೋಗ
(c) ಶಕ್ತಿ
(d) ಅಗ್ರ
(e) ಭಂಗ
(f) ವಸತಿ
(g) ತಪಸ್ವಿ
(h) ಶುನಕ
(i) ಯಜ್ಞ
(j) ದೇಶ

10. ಕೆಳಗಿನವುಗಳಲ್ಲಿ ಐದಕ್ಕೆ ವಿರುದ್ಧಾರ್ಥಕ ಶಬ್ದ ತಿಳಿಸಿ. 5

(a) ಆಡಂಬರ
(b) ಮೇಲರಿಮೆ
(c) ಮೃದು
(d) ಅಂತರಂಗ
(e) ಸಂಗತ
(f) ಉಚಿತ
(g) ಪಥ್ಯ
(h) ಮುಳುಗು
(i) ಜಡ
(j) ಸಾಪೇಕ್ಷ

11. ಕೆಳಗಿನ ಪದಗಳಲ್ಲಿ ಕಾಗುಣಿತ ತಪ್ಪಿರುವ ಐದು ಪದಗಳನ್ನು ಆರಿಸಿ, ಸರಿಪಡಿಸಿರಿ.

(a) ಜಾತ್ಯಾತೀತ
(b) ಅಮೂಲಾಗ್ರ
(c) ಕೋಟ್ಯಾಂತರ
(d) ಕೂಲಂಕುಷ
(e) ಭೋದನೆ
(f) ತುಲಭಾರ
(g) ಅಪರಾನ್ಹ
(h) ಮಾಂಸಹಾರಿ
(i) ಪ್ರಭಂದ
(j) ಬಾಂದವ್ಯ



REDMI NOTE 7 PRO
AI DUAL CAMERA